ಸಾಕ್ಷಿಯನ್ನು ದಿನಾಂಕ **06-10-2023** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ **2** ನೇ ಎದುರುದಾರರ ಪರವಾಗಿ ಶ್ರೀ ಕೆ.ಡಿ.ಡಿ, ವಕೀಲರಿಂದ, ನ್ಯಾಯಾಲಯದ ಅನುಮತಿಯ ಮೇರೆಗೆ.

42. ಪಿರಿಯಾಪಟ್ಟಣದಲ್ಲಿ ಸಾಗರ್ ಎಂಬ ಅರ್ಜಿದಾರರು MVC 466/2021 ರಂತೆ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಸಾಗರ್ ರವರು ನೀಡಿದ ಸಾಕ್ಷಿಯ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ, ಅದನ್ನು ನಿಆರ್-**17** ಎಂದು ಗುರುತಿಸಲಾಯಿತು.

ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್. ವಕೀಲರಿಂದಃ

43. ಸದರಿ ಸಾಗರ್ ಎಂಬ ವ್ಯಕ್ತಿಯನ್ನು ಈ ಪ್ರಕರಣದಲ್ಲಿ ಕರೆಯಿಸಿ ಸಾಕ್ಷ್ಯ ನುಡಿಸಲು ನನಗೇನು ತೊಂದರೆ ಇಲ್ಲ ಎಂದರೆ ಸರಿ. ಸದರಿ ಪ್ರಕರಣ ಇನ್ನೂ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಾಕ್ಷಿದಾರರನ್ನು ಇನ್ನೂ 1 ನೇ ಎದುರುದಾರರು ಪಾಟೀಸವಾಲು ಮಾಡಿಲ್ಲ ಎಂದರೆ ಸದರಿ ಪ್ರಕರಣದಲ್ಲಿ 1 ನೇ ಎದುರುದಾರರು ಹಾಜರಾಗಿಲ್ಲ. ಸದರಿ ಪ್ರಕರಣದಲ್ಲಿ ಮುಂದಿನ ನಡವಳಿಗಳು ಏನಾಗಿದೆ ಎಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬಹುದು ಎಂದರೆ ಸರಿ.

44. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವು ಮೈಸೂರು ಜಿಲ್ಲಾ ವರಿಷ್ಠಾಧಿಕಾರಿಗಳಿಗೆ ಒಂದು ಪಿರ್ಯಾದನ್ನು ನೀಡಿದ್ದೇವೆ ಎಂದರೆ ಸರಿ ಅದನ್ನು ನಾನು ಸಾಕ್ಷ್ಯ ನೀಡುವ ಮೊದಲೇ ನೀಡಿದ್ದೆವು. ನಾವು ಕೊಟ್ಟ ಪಿರ್ಯಾದಿಗೆ ಇನ್ನೂ ಯಾವುದೇ ಉತ್ತರ ಬಂದಿರುವುದಿಲ್ಲ.

45. ದಿನಾಂಕ 29.11.2022 ರಂದು ಸಾಕ್ಷ್ಯ ವಿಚಾರಣೆ ಪಿರಿಯಾಪಟ್ಟಣ ನ್ಯಾಯಾಲಯದಲ್ಲಿ ನಡೆದಿದೆ ಎಂದರೆ ಸರಿ. ಈ ಎಲ್ಲಾ ನಡವಳಿಗಳ ನಡುವೆ ಈ ಪ್ರಕರಣವನ್ನು ರದ್ದು ಗೊಳಿಸಬೇಕು ಎಂಬ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಯಾವುದೇ ಅರ್ಜಿ ಹಾಕಿಲ್ಲ. MVC 466/2021 ರಲ್ಲಿ ಸಾಗರ್ ಎಂಬ ಸಾಕ್ಷಿದಾರ ಮುಖ್ಯವಿಚಾರಣೆಯಲ್ಲಿ ಮಂಜುನಾಥ ವಾಹನ ಚಲಾಯಿಸಿ ಅಪಘಾತ ಮಾಡಿದ್ದೇನೆ ಎಂದು ತಿಳಿಸಿದ್ದಾನೆ ಎಂದರೆ ಸರಿ ಸಾಕ್ಷಿ ಮುಂದುವರೆದು ಪಾಟೀಸವಾಲಿನಲ್ಲಿ ಮೋಹನ್ ವಾಹನ ಚಲಾಯಿಸಿ ಅಪಘಾತ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಪೊಲೀಸ್ ನ ಎಲ್ಲಾ ದಾಖಲೆಗಳಲ್ಲಿ ಮಂಜುನಾಥನೆ ವಾಹನ ಚಲಾಯಿಸುತಿದ್ದ ಎಂದು ನಮೂದಾಗಿದೆ ಎಂದರೆ ಸರಿ ಸಾಕ್ಷಿ ತಾವಾಗಿಯೇ ನಮೂದಿಸಿದ್ದಾರೆ. ಆ ರೀತಿ ಸಾಕ್ಷ್ಯ ನುಡಿದ ನಂತರ ನಾವೇನು ವರಿಷ್ಠಾಧಿಕಾರಿಗಳಿಗೆ ಪುನಃ ಯಾವುದೇ ಪಿರ್ಯಾದನ್ನು ಕೊಡಲು ಹೋಗಿಲ್ಲ.

ಎಂ.ವಿ.ಸಿ **118/19**
**RW-4**

<u>ಪಾಟೀಸವಾಲು **1** ನೇ ಎದುರುದಾರರ ಪರವಾಗಿ ಶ್ರೀ ಬಿ.ಎಸ್.ಆರ್. ವಕೀಲರಿಂದಃ</u>

ಅರ್ಜಿದಾರರ ಪರ ವಕೀಲರು ಮಾಡಿರುವ ಪಾಟೀಸವಾಲನ್ನೇ 1 ನೇ ಎದುರುದಾರರ ಪರ ವಕೀಲರು ಅಳವಡಿಸಿಕೊಂಡಿದ್ದಾರೆ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.